Total No. of Questions : 29 ] [ Total No. of Printed Pages : 4

Code No. : **205-K**

**Diploma in Physical Education**

# ವಿಷಯಾಧಾರಿತ ಬೋಧನಾ ಪದ್ಧತಿ — ಕನ್ನಡ

# CONTENT BASED METHODOLOGY OF TEACHING — KANNADA

Date : 18. 05. 2019 ]

Time : 2.00 P.M. to 5.00 P.M. ] [ Max. Marks : 80

***ಸೂಚನೆಗಳು :*** i) ಪ್ರಶ್ನೆ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ.

ii) ಬರವಣಿಗೆ ಅಚ್ಚುಕಟ್ಟಾಗಿರಲಿ ಮತ್ತು ಅಂದವಾಗಿರಲಿ.

iii) ಸೂಚನೆಯಂತೆ ಉತ್ತರಿಸಿ ಮತ್ತು ಕಾಗದವನ್ನು ಅನಾವಶ್ಯಕವಾಗಿ ವ್ಯರ್ಥ ಮಾಡಬೇಡಿ.

## ಭಾಗ – I

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ತಲಾ ಎರಡು ಪುಟಗಳಿಗೆ ಮೀರದಂತೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಯ ***ಅ*** ಮತ್ತು ***ಬ*** ಉಪ–ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಬೇಕು : 4 × 8 = 32

1. ಅ) ಮಾತೃಭಾಷೆಯ ಅರ್ಥ ಮತ್ತು ಸ್ವರೂಪವನ್ನು ವಿಮರ್ಶಿಸಿ.

   ಬ) ಪ್ರಾಥಮಿಕ ಶಾಲೆಯಲ್ಲಿನ ಮಾತೃಭಾಷೆಯ ಲಕ್ಷಣಗಳನ್ನು ಪಟ್ಟಿ ಮಾಡಿ. ಅವುಗಳಲ್ಲಿ ಮೂರನ್ನು ವಿವರಿಸಿ. 4 + 4

2. ಅ) ಮಾತುಗಾರಿಕೆ ಎಂದರೇನು ? ಮಾತುಗಾರಿಕೆ ತರಬೇತಿಯ ವಿಧಾನಗಳನ್ನು ತಿಳಿಸಿ.

   ಬ) ಮಾತುಗಾರಿಕೆಯ ದೋಷಗಳು ಯಾವುವು ? ವಿವರಿಸಿ. 4 + 4

3. ಅ) ಗಟ್ಟಿ ಓದು ಎಂದರೇನು ? ಅದರ ಸ್ವರೂಪ ಮತ್ತು ಪ್ರಾಮುಖ್ಯತೆಯನ್ನು ತಿಳಿಸಿ.

   ಬ) ಗದ್ಯ ಬೋಧನೆಯ ವಿಧಾನಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿ. 4 + 4

4. ಅ) ಪದ್ಯ ಬೋಧನೆಯ ಸಾಮಾನ್ಯ ಮತ್ತು ನಿರ್ದಿಷ್ಟ ಉದ್ದೇಶಗಳನ್ನು ಬರೆಯಿರಿ.

ಬ) ಪಾಠಯೋಜನೆಯು ಒಳಗೊಂಡಿರಬೇಕಾದ ಮುಖ್ಯಾಂಶಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿ. 4 + 4

5. ಅ) ಮಕ್ಕಳಲ್ಲಿ ಅರ್ಥಗ್ರಹಣ ಸಾಮರ್ಥ್ಯ ಯಾವಾಗ ಬೆಳೆಸಲು ಸಾಧ್ಯವಾಗುತ್ತದೆ ?

ಬ) ಅಖಂಡ ಪದ್ಧತಿಯ ಪದ್ಯ ಬೋಧನೆಗೆ ಸೂಕ್ತ ವಿಶ್ಲೇಷಿಸಿ. 4 + 4

6. ಅ) ಕ್ರಿಯಾತ್ಮಕ ವ್ಯಾಕರಣ ಬೋಧನೆ ಎಂದರೇನು ? ಉದಾಹರಣೆಯೊಂದಿಗೆ ಬರೆಯಿರಿ.

ಬ) ಮೇಲ್ವಿಚಾರಣೆ ಎಂದರೇನು ? ಅದರ ವಿಧಾನಗಳ ಪಟ್ಟಿಯೊಂದಿಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿ. 4 + 4

7. ಅ) ಸುಂದರ ಬರಹದ ಪ್ರಯೋಜನಗಳನ್ನು ತಿಳಿಸಿ.

ಬ) ಅಣುಬೋಧನಾ ಪಾಠ ಯೋಜನೆಯನ್ನು ತಯಾರಿಸುವ ವಿವಿಧ ಹಂತಗಳನ್ನು ಪಟ್ಟಿ ಮಾಡಿ ಮತ್ತು ವಿವರಿಸಿ. 4 + 4

## ಭಾಗ – II

II. ಈ ಕೆಳಗಿನವುಗಳಲ್ಲಿ ಯಾವುದಾದರೂ **ಆರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯ ಉತ್ತರವು ಒಂದೂವರೆ ಪುಟಗಳಿಗೆ ಮೀರದಿರಲಿ. 6 × 5 = 30

8. ಭಾಷಾ ಬೋಧನಾ ಶಿಕ್ಷಕನ ವೈಯಕ್ತಿಕ ಸಾಮರ್ಥ್ಯಗಳನ್ನು ವಿವರಿಸಿ.

9. ಉತ್ತಮ ಪಠ್ಯಪುಸ್ತಕದ ಬಾಹ್ಯ ಗುಣಲಕ್ಷಣಗಳೇನು ?

10. ಮುದ್ರಿತ ಸಂಪನ್ಮೂಲಗಳು ಭಾಷಾಕಲಿಕೆಯಲ್ಲಿ ಬಹಳ ಉಪಯುಕ್ತ. ನಿರೂಪಿಸಿ.

11. ಕಪ್ಪುಹಲಗೆ ಅತ್ಯುತ್ತಮ ಬೋಧನಾ ಸಾಧನವಾಗಿದೆ. ನಿರೂಪಿಸಿ.

12. ಕ್ರೀಡಾ ವಿಧಾನ ಎಂದರೇನು ? ಈ ವಿಧಾನದ ಗುಣ ಮತ್ತು ಅವಗುಣಗಳನ್ನು ಬರೆಯಿರಿ.

13. ಓದುಗಾರಿಕೆಯ ಪ್ರಕಾರಗಳನ್ನು ವಿವರಿಸಿ.

14. ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಬರಹ ಕಲಿಸುವ ವಿಧಾನಗಳಾವುವು ?

15. ಚಿತ್ರ ಫಲಕಗಳ ಶೈಕ್ಷಣಿಕ ಪ್ರಾಮುಖ್ಯತೆಯನ್ನು ವಿವರಿಸಿ.

## ಭಾಗ – III

III. ಈ ಕೆಳಗಿನವುಗಳಲ್ಲಿ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಯ ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ. $3 \times 3 = 9$

16. ಅನುಗಮನ ಪದ್ಧತಿ ಎಂದರೇನು ? ಉದಾಹರಣೆ ನೀಡಿ.

17. ದಿನಚರಿ ಬರೆಯುವ ಅಭ್ಯಾಸ ಪ್ರತಿ ವ್ಯಕ್ತಿಗೆ ಹೇಗೆ ಸಹಾಯಕವಾಗಿದೆ ?

18. ಕಂಠಪಾಠ ಮಾಡುವುದರ ಪ್ರಯೋಜನಗಳನ್ನು ಪಟ್ಟಿ ಮಾಡಿ. ಸಂಕ್ಷಿಪ್ತವಾಗಿ ವಿವರಿಸಿ.

19. ದೃಕ್ ಶ್ರವಣೋಪಕರಣಗಳ ವಿವಿಧ ಬಗೆಗಳಾವುವು ? ವಿವರಿಸಿ.

20. ಶಿರೋನ್ನತ ಪ್ರಕ್ಷೇಪಣದ ( OHP ) ಮಹತ್ವವನ್ನು ಬರೆಯಿರಿ.

## ಭಾಗ – IV

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : $9 \times 1 = 9$

21. ಪಠ್ಯಪುಸ್ತಕ ಎಂದರೇನು ?

22. ಅಖಂಡ ಪದ್ಧತಿ ಎಂದರೇನು ?

23. ದಿನಚರಿ ಎಂದರೇನು ?

24. ಅನುಬೋಧನೆ ಎಂದರೇನು ?

25. ಕ್ರಿಯಾತ್ಮಕ ವ್ಯಾಕರಣ ಎಂದರೇನು ?

26. ಶಬ್ದ ಭಂಡಾರ ಎಂದರೇನು ?

27. ಭಾಷಾ ಕಲಿಕೆ ತತ್ತ್ವಗಳಲ್ಲಿ ಎರಡನ್ನು ಹೆಸರಿಸಿ.

28. ವಿಶ್ವಕೋಶ ಎಂದರೇನು ?

29. ಗೆಯ್ಮೆ ಎಂದರೇನು ?